ನನ್ನ ಕತೆ ಮುಗಿದಂತೆ ಎಂದು ನೀರನ್ನು ಸುರಿದುಕೊಳ್ಳುತ್ತಾನೆ. ಮನೆಯ ಜವಾಬ್ದಾರಿ ಹೊತ್ತುಕೊಳ್ಳುವುದು ಅವಳಿಗೆ ಅಭ್ಯಾಸವಾಗಿದೆ. ನಮ್ಮ ಪಕ್ಕದ ಮನೆಯವರ ಕಿವಿಗಳಂತೂ ನಮ್ಮ ಗೋಡೆಗೆ ಅಂಟಿಕೊಂಡೇ ಇರುತ್ತವೆ. ಛೇ!... ಈ ಗೋಡೆಗಳಂತೂ ತಾವು ಕೇಳಿಸಿಕೊಳ್ಳುವುದಷ್ಟೇ ಅಲ್ಲದೇ ಪಕ್ಕದ ಮನೆಯವರಿಗೂ ಕೇಳಿಸುತ್ತವೆ. ನಮ್ಮ ಮನೆಯ ಪತ್ರ ಅವರ ಮುಖದ ಮೇಲೆ ಅಚ್ಚೊತ್ತಿದ ಹಾಗೆ ಬದುಕು ಖಾಸಗಿಯಾಗಿ ಉಳಿಯದೇ ಸಾರ್ವಜನಿಕವಾಗಿದೆ. ಅವನಿಗೆ ಏರುತ್ತಿರುವ ಬೆಲೆಗಳ ಮೇಲೆ ಸಿಟ್ಟು. ಎಷ್ಟೇ ಕಸರತ್ತು ಮಾಡಿದರೂ ದುಡ್ಡು ಉಳಿಸಲು ಆಗುವುದಿಲ್ಲವೆನ್ನುವುದೇ ಚಿಂತೆ. ಹಾಲಿನ ಬಾಟಲ್ ಕೂಡಾ ತೆಗೆದುಕೊಳ್ಳಲು ಹಿಂದೆ ಮುಂದೆ ನೋಡಬೇಕು. ಯಾವಾಗಲೂ ಪಕ್ಕದ ಮನೆಯವರಿಗೆ "ಹುಡುಗರಿಗೆ ಬಾಟಲಿ ಹಾಲು ಇಷ್ಟವಾಗುವುದಿಲ್ಲವೆಂದು" ಸುಳ್ಳು ಹೇಳಬೇಕು. ಮೊದಲಾದರೆ ತಿಂಗಳಿಗೆ ಒಂದು ಬಾರಿಯಾದರೂ ಫಿಲ್ಮ್ ನೋಡಬಹುದಾಗಿತ್ತು. ಈಗಂತೂ ಪಾಟೀಲನ ಮನೆಯ ಟೀವಿಯಲ್ಲಿಯೇ ಎಲ್ಲ ನೋಡುವಂತಾಗಿದೆ. ಈಗೀಗ ಕಂಪನಿಯಲ್ಲಿ ಮಧ್ಯಾಹ್ನ ಚಾ ಕುಡಿಯುವುದನ್ನು ನಿಲ್ಲಿಸಿದ್ದಾನೆ. ಪೇಪರ್ ಬಂದ್ ಮಾಡಬೇಕಿದೆ. ಆ ಪೇಪರಿನಲ್ಲಾದರೂ ಏನಿದೆ ಮಣ್ಣು!

ಟವಲಿನಿಂದ ಮೈ ಒರೆಸಿಕೊಂಡು ಪ್ಯಾಂಟ್ ಹಾಕಿಕೊಳ್ಳುವಾಗ ಆ ಟೆರ್ಲಿನ್ ಪ್ಯಾಂಟಿನ ಗಟ್ಟಿತನದ ಬಗ್ಗೆ ಖುಷಿಯಾಗುತ್ತದೆ. ಐದಾರು ವರ್ಷದ ಹಿಂದೆ ಹೊಲಿಸಿದ ಪ್ಯಾಂಟ್ ಹರಿಯುವ ಮಾತೇ ಇಲ್ಲ... ಅಷ್ಟು ಗಟ್ಟಿಯಾಗಿದೆ. ಆ ಪ್ಯಾಂಟಿನ ಗಟ್ಟಿತನದೊಂದಿಗೆ ಅವನಿಗೆ ತನ್ನ ವಯಸ್ಸು ನೆನಪಾಗುತ್ತದೆ. ನಿಂತುಕೊಂಡೆ ನಾಷ್ಟಾ ಮಾಡುತ್ತಾ ಅದನ್ನೇ ತದೇಕಚಿತ್ತದಿಂದ ದಿಟ್ಟಿಸಿ 'ದಿನಾ ಅದೇ!... ಮನುಷ್ಯ ಶರೀರಕ್ಕೆ ಅಂಟಿದ ತೊನ್ನಿನ ಹಾಗೆ ಕಪ್ಪು ಬಿಳಿ ಚಪಾತಿ, ಅದೇ ಬಾಜಿ' ಎಂದು ತಿಂದು, ಎರಡು ಮೂರು ಎಣ್ಣೆಯಿಲ್ಲದ ಚಪಾತಿಗಳನ್ನು ಪೇಪರಿನಲ್ಲಿ ಸುತ್ತಿಕೊಳ್ಳುತ್ತಾನೆ.

ಚಹಾ ಕುಡಿಯುತ್ತಿರುವಾಗ ಹೆಂಡತಿ ಏನೋ ಹೇಳಬೇಕೆಂದು ಹತ್ತಿರ ಬಂದು ನಿಲ್ಲುತ್ತಾಳೆ. ಆಕೆಯ ಕಣ್ಣಿನಲ್ಲಿ ಸಿಟ್ಟು ಆರಿ ಸ್ನೇಹ ಬೆಳೆದಂತೆ ಕಾಣುತ್ತದೆ.

"ರೀ ಇವತ್ತು ಬೇಗ ಮನೆಗೆ ಬನ್ನಿ. ಬರುವಾಗ ಹಾಗೇ ಯಾರ ಹತ್ತಿರನಾದರೂ ಇಪ್ಪತ್ತು ರೂಪಾಯಿ ಸಾಲ ಇಸಿದುಕೊಂಡು ಬನ್ನಿ. ಈ ವಾರದ ರೇಷನ್‌ಗೆ ಆಗುತ್ತದೆ" ಎನ್ನುತ್ತಾಳೆ.

ಅವಳ ಮಾತುಗಳನ್ನು ಕೇಳುತ್ತಲೇ ಕಣ್ಣುಗಳ ಮುಂದೆ ಕತ್ತಲೆ ಆವರಿಸಿ ದೇವರೇ ಯಾರನ್ನು ಕೇಳುವುದು? ನನ್ನ ಗೆಳೆಯರು ನನ್ನ ಹಾಗೆ ಖಾಲಿ ಜೇಬಿನವರೆ. ನನ್ನ ವಾರಿಗೆಯ ಕೆಲಸದವರು ನನ್ನ ಹಾಗೆ ಪಗಾರಿಗೆ ಬಕ ಪಕ್ಷಿಯಂತೆ ಕಾಯುವವರೆ.

"ಕೇಳುತ್ತೇನೆ... ವ್ಯವಸ್ಥೆಯಾದರೆ ಇಪ್ಪತ್ತು ರೂಪಾಯಿ ತರುತ್ತೇನೆ" ಎಂದು ಹೇಳಿ ಕಾರ್ಖಾನೆಗೆ ಹೋಗುತ್ತಿರಬೇಕಾದರೆ ಬಣ್ಣ ಬಣ್ಣದ ಲುಂಗಿ ಸುತ್ತಿಕೊಂಡು, ಮೇಲೊಂದು ಬನಿಯನ್ ಹಾಕಿ, ಕೊರಳಲೊಂದು ಬಂಗಾರದ ಲಾಕೀಟು, ಅದರ ಮೇಲೆ ಸತ್ಯ ಸಾಯಿಬಾಬಾನ ಚಿತ್ರ ಬಿಡಿಸಿದ ಚೈನ್ ಹಾಕಿಕೊಂಡು ಮಜಾಸಿರಿ ನಡೆಯುತ್ತಾ ಪಾಟೀಲ ಇವರ ಮನೆ ಕಡೆಗೆ ಬರುವುದನ್ನು ನೋಡಿ ನಿಲ್ಲುತ್ತಾನೆ.

"ಏನ್ರೀ ಸಾಹೇಬ್ರ ಆಫೀಸಿಗೆ ಹೊಂಟ್ರಿ" ಎಂದು ಕೇಳುತ್ತಾ ಪಾಟೀಲ ಮನೆಯೊಳಗೆ ಬರುತ್ತಾನೆ.

"ಟೈಮ್ ಆಗೇದ ಹೋಗಬೇಕಲ್ರಿ" ಎಂದು ಹೇಳುತ್ತಾ ಹೊರಡಲು ಮುಂದಾಗುತ್ತಾನೆ.

"ಇದೊಂದು ಬ್ಯಾಂಕ್ ಸ್ಲಿಪ್ ತುಂಬಿ ಕೊಡ್ರಿ" ಎನ್ನುತ್ತಾ ಹಿಂದಿ ಭಾಷೆಯಲ್ಲಿದ್ದ ಸ್ಲಿಪ್ ಅವನ ಮುಂದೆ ಹಿಡಿಯುತ್ತಾನೆ.

"ಎಷ್ಟು ದುಡ್ಡು ಹಾಕಬೇಕು?"

"ನಾಲ್ಕು ಸಾವಿರ."